

# ದೇವರು/ದೆವ್ವ ಮೈಮೇಲೆ ಬರುತ್ತದೆಯೇ?

**ಮೈಮೇಲೆ ದೇವರು/ದೆವ್ವ ಬಂದಿದೆ ಎಂದು ಹೇಳುತ್ತಾ ವಿಚಿತ್ರವಾಗಿ ವರ್ತಿಸುವವರಿಗೆ ಮನೋಕಾಯಿಲೆಗಳಿರುತ್ತವೆ. ವೈದ್ಯಕೀಯ ಭಾಷೆಯಲ್ಲಿ ಟ್ರಾನ್ಸ್ ಮತ್ತು ಪೊಸೆಷನ್ ಡಿಸಾರ್ಡರ್ ಎಂದು ಕರೆಯುವ ಈ ಸಮಸ್ಯೆಗೆ ಮನೋವೈದ್ಯರ ಬಳಿ ಸೂಕ್ತ ಪರಿಹಾರವಿದೆ.**

**■ ಡಾ. ಕೆ.ಎಸ್. ಶುಭ್ರತಾ**

ಮೂವತ್ನಾಲ್ಕು ವರ್ಷ ವಯಸ್ಸಿನ ಗಂಗಮ್ಮನ ಮೇಲೆ ಕಳೆದ ಹದಿನೈದು ದಿನಗಳಿಂದ ಪ್ರೇತ ಬರುತ್ತಿತ್ತು. ಆ ಪ್ರೇತ ಬೇರೆ ಯಾರದ್ದೂ ಅಲ್ಲ. ತೀರಿಹೋದ ಸವತಿಯ ಪ್ರೇತ. ಗಂಗಮ್ಮನ ಗಂಡ ರಂಗಪ್ಪ ಒಳ್ಳೆಯವನೇ, ಕುಡಿತದಂತಹ ದುರಭ್ಯಾಸಗಳಾವುವೂ ಇರಲಿಲ್ಲ. ಕಷ್ಟಪಟ್ಟು ದುಡಿಯುತ್ತಿದ್ದ. ಮೊದಲ ಹೆಂಡತಿ ಮಂಜಮ್ಮ ಮದುವೆಯಾಗಿ ನಾಲ್ಕು ವರ್ಷಗಳ ನಂತರ ತೀರಿಹೋದಳು. ಅದಾಗಿ ಒಂದು ವರ್ಷಕ್ಕೇ ರಂಗಪ್ಪ ಮರುಮದುವೆಯಾಗಿದ್ದ. ಗಂಗಮ್ಮನನ್ನು ಪ್ರೀತಿಯಿಂದಲೇ ನೋಡಿಕೊಳ್ಳುತ್ತಿದ್ದ. ಆದರೆ ಕಳೆದ ಹದಿನೈದು ದಿನಗಳಿಂದ ಗಂಗಮ್ಮನ ಮೇಲೆ ಬರುತ್ತಿದ್ದ ಮೊದಲ ಹೆಂಡತಿಯ ಪ್ರೇತ ದೊಡ್ಡ ತಲೆನೋವಾಗಿತ್ತು.

ದಿನಕ್ಕೆ ಮೂರು ನಾಲ್ಕು ಬಾರಿ ಗಂಗಮ್ಮನಿಗೆ ಈ ರೀತಿ ಆಗಿ ಸುಸ್ತಾಗುತ್ತಿದ್ದಳು. ಆ ಸಮಯದಲ್ಲಿ 'ನಾನು ಮಂಜಮ್ಮ. ಇಲ್ಲೇ ಇರ್ತೀನಿ. ನನ್ನನ್ನು ಚೆನ್ನಾಗಿ ನೋಡಿಕೊಳ್ಳಿ' ಎಂದು ಬೇರೆಯ ದನಿಯಲ್ಲಿ ಗಂಗಮ್ಮ ಹೇಳುತ್ತಿದ್ದಳು. ರಾತ್ರಿ ನಿದ್ರೆ ಕಡಿಮೆ, ಸದಾ ಮಂಕು... ಈ ಪ್ರೇತಕ್ಕೆ ಶಾಂತಿ ಮಾಡಿಸಿದರು. ದೇವಸ್ಥಾನಕ್ಕೆ ಕರೆದೊಯ್ದು ಮೂರು ದಿನಗಳ ಪೂಜೆ ಪುನಸ್ಕಾರಗಳಾದವು. ಆದರೂ ದಿನೇ ದಿನೇ ಗಂಗಮ್ಮನ ಸುಸ್ತುಸಮಸ್ಯೆಗಳು ಜಾಸ್ತಿ ಆದವು. ಪಕ್ಕದ ಮನೆಯವರ ಸಲಹೆಯ ಮೇರೆಗೆ ಮನೋವೈದ್ಯರಲ್ಲಿ ಕರೆತಂದರು. ಅಲ್ಲಿ ಸವಿವರವಾದ ಪರೀಕ್ಷೆ, ಆಪ್ತ ಸಮಾಲೋಚನೆ ಆಗುತ್ತಿದ್ದ ಹಾಗೇ ರಂಗಪ್ಪನಿಗೆ ಸಮಸ್ಯೆ ಯಾವುದೆಂದು ಅರ್ಥವಾಗಿದ್ದು.

ಗಂಗಮ್ಮ ಕಳೆದ ಆರು ತಿಂಗಳಿನಿಂದ ಸಂಶಯ ಮಾಡುತ್ತಿದ್ದಳು. ಗಂಡ ಯಾವ ಮಹಿಳೆಯೊಂದಿಗೂ ಮಾತನಾಡಬಾರದು, ಮನೆಗೆ ಬರುವುದು ಒಂದು ನಿಮಿಷ ತಡವಾದರೆ, ಸಿಟ್ಟು ಮಾಡುವುದು ಇತ್ಯಾದಿ. ಈಗ ಈ ವರ್ತನೆಗಳ ಅರ್ಥ ರಂಗಪ್ಪನಿಗೆ ತಿಳಿಯಿತು. ಮನೋವೈದ್ಯರ ಪ್ರಕಾರ ಗಂಗಮ್ಮನ ಗಂಡನ ಚಾರಿತ್ರ್ಯದ ಬಗ್ಗೆ ಭ್ರಮೆ (delusion of infidelity) ಇದ್ದು ಅದರಿಂದಾಗಿ ತೀವ್ರ ಖಿನ್ನತೆ ಉಂಟಾಗಿತ್ತು. ಈ ಖಿನ್ನತೆಯ ಭಾಗವಾಗಿಯೇ ಈ ಮೊದಲ ಹೆಂಡತಿಯ ಪ್ರೇತ ಮೈಮೇಲೆ ಬರುತ್ತಿತ್ತು.

## ಟ್ರಾನ್ಸ್ ಮತ್ತು ಪೊಸೆಷನ್ ಡಿಸಾರ್ಡರ್

ಮನೋವೈದ್ಯಕೀಯ ಭಾಷೆಯಲ್ಲಿ ಈ ದೇವರು/ದೆವ್ವ/ಪ್ರೇತ ಮೈಮೇಲೆ ಬರುವ ಅಟ್ಯಾಕ್‌ಗಳು ಟ್ರಾನ್ಸ್